# ವಾರ್ತಾ ಪತ್ರಿಕೆ

RURAL ORIENTED & FARMER FRIENDLY
ಗ್ರಾಮೀಣಾಭಿವೃದ್ಧಿ ಧ್ಯೇಯ-ರೈತ ಬಂಧು

ಕನ್ನಡ ಕಾಯಕ ವರ್ಷ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಅಂಚೆ ಸಂ. 06, ಬೀದರ-585 226

ಸಂಪುಟ: ೧೫ ಸಂಚಿಕೆ: ೨

ಜುಲೈ-ಡಿಸೆಂಬರ್, ೨೦೨೧

## ಆಯೋಜಿತ ತರಬೇತಿಗಳು / ಕಾರ್ಯಕ್ರಮಗಳು / ಸಮಾವೇಶಗಳು / ವಿಚಾರ ಸಂಕಿರಣಗಳು / ಪ್ರದರ್ಶನಗಳು / ಪಶು ಆರೋಗ್ಯ ಶಿಬಿರಗಳು / ಕ್ಷೇತ್ರ ದಿನಗಳು:

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

- ಪ್ರಾಣಿಜನ್ಯ ರೋಗಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ಅಂತರ್ ವಲಯಗಳ ಸಮನ್ವಯವನ್ನು ಬಲಪಡಿಸುವ ಕಾರ್ಯಕ್ರಮವನ್ನು ೭ನೇ ಜುಲೈ ೨೦೨೧ರಂದು ಹಮ್ಮಿಕೊಳ್ಳಲಾಯಿತು.
- ವರ್ಲ್ಡ್ ಆರ್ಗನೈಸೇಶನ್ ಫಾರ್ ಅನಿಮಲ್ ಹೆಲ್ತ್ (ಓಐಇ) ಮತ್ತು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ-ಸಿವಿಎ ರೇಬೀಸ್ ಡಯಾಗ್ನೋಸ್ಟಿಕ್ ಲ್ಯಾಬೊರೇಟರಿ ಓ.ಐ.ಇ. ರೆಫರೆನ್ಸ್ ಲ್ಯಾಬೊರೇಟರಿ, ಪಶುವೈದ್ಯಕೀಯ ಸೂಕ್ಷ್ಮ ಜೀವವಿಜ್ಞಾನ ವಿಭಾಗದಿಂದ ೧೧ ರಿಂದ ೧೩ನೇ ಅಕ್ಟೋಬರ್, ೨೦೨೧ ರಂದು ಸಾರ್ಕ್ ದೇಶಗಳಲ್ಲಿ "ರೇಬೀಸ್ ಸೆರೋಲಜಿ" ಕುರಿತು ಓ.ಐ.ಇ. ವರ್ಚುವಲ್ ಸರಣಿ ತರಬೇತಿಗಳನ್ನು ಆಯೋಜಿಸಲಾಯಿತು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

- ಪಶುವೈದ್ಯಕೀಯ ಶಸ್ತ್ರಚಿಕಿತ್ಸಾ ಮತ್ತು ಕ್ಷ-ಕಿರಣಶಾಸ್ತ್ರ ವಿಭಾಗದಿಂದ ೧೩ನೇ ನವೆಂಬರ್, ೨೦೨೧ ರಂದು "ದೊಡ್ಡ ಮತ್ತು ಸಣ್ಣ ಪ್ರಾಣಿಗಳಲ್ಲಿ ಮೂಳೆ ಮುರಿತಗಳ ನಿರ್ವಹಣೆ" ಕುರಿತು ಒಂದು ದಿನದ ರಾಜ್ಯ ಮಟ್ಟದ ಶಸ್ತ್ರಚಿಕಿತ್ಸಾ ಸಮ್ಮೇಳನವನ್ನು ಆಯೋಜಿಸಲಾಯಿತು.



- ಆತ್ಮ-ಸಮೇತಿ (ಉತ್ತರ) ಯೋಜನೆಯಡಿ ೨೯ ರಿಂದ ೩೦ನೇ ನವೆಂಬರ್, ೨೦೨೧ರವರೆಗೆ "ಪ್ರಾಣಿಗಳ ಆರೋಗ್ಯ ಮತ್ತು ಉತ್ಪಾದನೆಯಲ್ಲಿನ ನವೀನತೆಗಳು" ಕುರಿತು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಅಧಿಕಾರಿಗಳಿಗಾಗಿ ಎರಡು ದಿನಗಳ ಅಂತರಜಾಲ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ

- ವಿಸ್ತರಣಾ ಶಿಕ್ಷಣ ಕೇಂದ್ರ, ಶಿವಮೊಗ್ಗ ದಿಂದ ೨೯-೩೧ನೇ ಡಿಸೆಂಬರ್, ೨೦೨೧ರವರೆಗೆ "ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ" ಕುರಿತು ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ರೈತರಿಗಾಗಿ ಆಯೋಜಿಸಲಾಯಿತು.



- ಮಲೆನಾಡು ಗಿಡ್ಡ ಸಂಶೋಧನಾ ಮತ್ತು ಮಾಹಿತಿ ಕೇಂದ್ರ ಹಾಗೂ ಪ್ರಾಣಿ ಅನುವಂಶೀಯತೆ ಮತ್ತು ಸಂವರ್ಧನೆ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ ಇವರ ಸಂಯುಕ್ತ ಆಶ್ರಯದಲ್ಲಿ ೫, ೭ ಮತ್ತು ೧೪ ಜುಲೈ, ೨೦೨೧ ರಂದು ಅಂತರ್ಜಾಲದ ಮೂಲಕ ರೈತರಿಗೆ "ಮಲೆನಾಡು ಗಿಡ್ಡ ತಳಿಯ ಮೌಲ್ಯವರ್ಧಿತ ಹಾಲಿನ ಉತ್ಪನ್ನಗಳು", "ಸಾವಯವ ಕೃಷಿ ಪದ್ಧತಿಗಾಗಿ ಸಗಣಿ ಮತ್ತು ಗೋ ಮೂತ್ರದಿಂದ ವಿವಿಧ ಉತ್ಪನ್ನಗಳ ತಯಾರಿಕೆ" ಕುರಿತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

- ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ (ಹಮೂಲ್), ಹಾಸನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃತಕ ಗರ್ಭಧಾರಣ ತಂತ್ರಜ್ಞರಿಗಾಗಿ ೧೨ನೇ ಅಕ್ಟೋಬರ್, ೨೦೨೧ರಂದು "ಕೃತಕ ಗರ್ಭಧಾರಣೆಯಲ್ಲಿ ಆಧುನಿಕ ತಾಂತ್ರಿಕತೆಗಳು ಮತ್ತು ಸಂತಾನೋತ್ಪತ್ತಿಯಲ್ಲಿ ಪೋಷಕಾಂಶಗಳ ಪಾತ್ರ" ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.
- ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನದಡಿ ೧೬ ಮತ್ತು ೧೭ನೇ ಡಿಸೆಂಬರ್, ೨೦೨೧ರವರೆಗೆ "ಜಾನುವಾರು ರೋಗಗಳಲ್ಲಿ ಪ್ರಥಮ ಚಿಕಿತ್ಸೆ ಮತ್ತು ಬಂಜೆತನ ನಿರ್ವಹಣೆ" ಕುರಿತು ರೈತರಿಗಾಗಿ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.





### ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ

- ಸಮೇತಿ (ಉತ್ತರ) ಪ್ರಾಯೋಜಕತ್ವದಲ್ಲಿ ಉತ್ತರ ಕರ್ನಾಟಕದ ವಿವಿಧ ಕೃಷಿ ಮತ್ತು ಸಂಬಂಧಿತ ಇಲಾಖೆಗಳ ವಿಸ್ತರಣಾ ಕಾರ್ಯಕರ್ತರಿಗೆ ಮತ್ತು ಅಧಿಕಾರಿಗಳಿಗೆ ೧೮-೧೯ನೇ ನವೆಂಬರ್, ೨೦೨೧ರವರೆಗೆ "ಸುಧಾರಿತ ಹೈನುಗಾರಿಕೆ ಪದ್ಧತಿಗಳು" ಎಂಬ ವಿಷಯದ ಕುರಿತು ಎರಡು ದಿನಗಳ ಅಂತರಜಾಲ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.
- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ಗದಗ ಮತ್ತು ಪಶುಪಾಲನಾ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆ, ಗದಗ ಇವರ ಸಹಯೋಗದಲ್ಲಿ ಗದಗ ತಾಲೂಕಿನ ನೀಲಗುಂದ ಗ್ರಾಮದಲ್ಲಿ ರೈತರಿಗಾಗಿ ೨೩-೨೫ನೇ ಅಗಸ್ಟ್, ೨೦೨೧ವರೆಗೆ "ವೈಜ್ಞಾನಿಕ ಹೈನುಗಾರಿಕಾ ಪದ್ಧತಿಗಳು" ವಿಷಯದ ಮೇಲೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

- "ಸ್ನಾತಕೋತ್ತರ ಪದವಿ-ವೃತ್ತಿ ಪ್ರಗತಿಗೆ ಒಂದು ಮೆಟ್ಟಿಲು" ವಿಚಾರಗೋಷ್ಠಿ ಉದ್ಘಾಟನಾ ಕಾರ್ಯಕ್ರಮವನ್ನು ೨೯ನೇ ಅಕ್ಟೋಬರ್, ೨೦೨೧ ರಂದು ಹೈನು ಸೂಕ್ಷ್ಮಾಣುಜೀವಶಾಸ್ತ್ರ ವಿಭಾಗದಿಂದ ಹಮ್ಮಿಕೊಳ್ಳಲಾಯಿತು.



- ಹೈನು ತಂತ್ರಜ್ಞಾನ ವಿಭಾಗದಿಂದ ೪ ರಿಂದ ೬ನೇ ಡಿಸೆಂಬರ್, ೨೦೨೧ರವರೆಗೆ "ಮೌಲ್ಯವರ್ಧಿತ ಹೈನು ಉತ್ಪನ್ನಗಳು" ಕುರಿತು ೩ ದಿನಗಳ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



### ಹೈನು ವಿಜ್ಞಾನ ಮಹಾವಿದ್ಯಾಲಯ, ಕಲಬುರಗಿ

- ಹೈನು ಸೂಕ್ಷ್ಮಾಣುಜೀವಶಾಸ್ತ್ರ ಮತ್ತು ಹೈನು ತಾಂತ್ರಿಕ ವಿಭಾಗದ ಸಂಯುಕ್ತ ಆಶ್ರಯದಲ್ಲಿ ವಿ.ಕೆ. ಸಲಗರ ಗ್ರಾಮದಲ್ಲಿ ೪೦ ಜನ ರೈತರಿಗಾಗಿ "ಶುದ್ಧ ಹಾಲಿನ ಉತ್ಪಾದನೆ ಮತ್ತು ಹಾಲಿನ ಉತ್ಪನ್ನಗಳ ಪ್ರಾತ್ಯಕ್ಷತೆ" ಕುರಿತು ತರಬೇತಿ ಕಾರ್ಯಕ್ರಮವನ್ನು ಸೆಪ್ಟೆಂಬರ್ ೧೬, ೨೦೨೧ರಂದು ಹಮ್ಮಿಕೊಳ್ಳಲಾಯಿತು.

### ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು

- ದಿನಾಂಕ ೧೦.೭.೨೦೨೧ ರಂದು ಮಂಗಳೂರಿನ ಮೀನುಗಾರಿಕಾ ಮಹಾವಿದ್ಯಾಲಯದ ಸಂಶೋಧನೆ ಮತ್ತು ಶೈಕ್ಷಣಿಕ ಮೀನು ಸಾಕಣೆ ಕೇಂದ್ರದಲ್ಲಿ ರಾಷ್ಟ್ರೀಯ ಮೀನು ಕೃಷಿಕರ ದಿನವನ್ನು ಆಚರಿಸಲಾಯಿತು.



- ೨೧.೧೧.೨೦೨೧ ರಂದು ಮಂಗಳೂರಿನ ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ವಿಶ್ವ ಮೀನುಗಾರಿಕಾ ದಿನಾಚರಣೆಯ ಸಂದರ್ಭದಲ್ಲಿ "ಅಲಂಕಾರಿಕ ಮೀನುಗಳು" ಕುರಿತು ಪ್ರದರ್ಶನವನ್ನು ಆಯೋಜಿಸಲಾಯಿತು.

### ವನ್ಯಜೀವಿ ಪಶುವೈದ್ಯಕೀಯ ಸಂಶೋದನಾ ಸಂಸ್ಥೆ, ದೊಡ್ಡಳುವಾರ

- ಕೊಡಗು ಜಿಲ್ಲೆಯ ರೈತರಿಗಾಗಿ ಡಿಸೆಂಬರ್ ೯, ೨೦೨೧ರಂದು "ಮಾನವ ವನ್ಯಜೀವಿ ಸಂಘರ್ಷ ಮತ್ತು ತಡೆಗಟ್ಟುವಿಕೆ" ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

### ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ನಾಗಮಂಗಲ ಮಂಡ್ಯ

- ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಮಹಿಳಾ ಫಲಾನು... ರೈತರಿಗೆ "ವೈಜ್ಞಾನಿಕ ಮತ್ತು ಲಾಭದಾಯಕ ಕುರಿ ಸಾಕಾಣಿಕೆ" ಕುರಿತು ಒಂದು ದಿನ... ತರಬೇತಿ ಕಾರ್ಯಕ್ರಮವನ್ನು ನವೆಂಬರ್ ೨೮, ೨೦೨೧ ರಂ... ಆಚೋೕಜಿಸಲಾಯಿತು.



- ಬಂಡೂರು ಕುರಿಗಳ ಸಂರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮವ... ನಾಗಮಂಗಲದ ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ... ದಿನಾಂಕ ೦೮.೧೧.೨೦೨೧ ರಂದು ಮಂಡ್ಯ ತಾಲೂಕಿನ ಕೆ.ಆರ್. ... ಫಲಾನುಭವಿ ರೈತರಿಗಾಗಿ ಆಯೋಜಿಸಲಾಯಿತು.



### ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಹಳ್ಳಿಖೇಡ

- ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಐಸಿಎಆರ್) ನವದೆಹಲಿ ಪ್ರಾಯೋಜಿಸಿರುವ ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಅಡಿಯಲ್ಲಿ ೨೦ನೇ ನವೆಂಬರ್, ೨೦೨೧ರಂದು ... ಜಿಲ್ಲೆಯ ಕಾಡವಾದ ಗ್ರಾಮದಲ್ಲಿ ಜಾನುವಾರು ಆರೋಗ್ಯ ... ಹಾಗೂ ಕರುಗಳ ಪ್ರದರ್ಶನ ಆಚೋೕಜಿಸಲಾಯಿತು.



- ರಾಷ್ಟ್ರೀಯ ಕೃಷಿಕರ ದಿನಾಚರಣೆಯ ಅಂಗವಾಗಿ ಡಿಸೆಂಬರ್ ... ೨೦೨೧ರಂದು ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ), ಹಳ್ಳಿಖೇಡ ಇಲ್ಲಿ ದೇವಣಿ ತಳಿ ಜಾನುವಾರುಗಳ ಪ್ರದರ್ಶನ ಹಾಗೂ ವೈಜ್ಞಾನಿಕ ಹೈನುಗಾರಿಕೆ ಪದ್ಧತಿಗಳ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಯಿತು.



## ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಅಂಕೋಲಾ

- ವಿಶ್ವ ಮೀನುಗಾರಿಕೆ ದಿನಾಚರಣೆ ಅಂಗವಾಗಿ "ಸಮುದ್ರ ಪಾಚಿ ಕೃಷಿ ಮತ್ತು ಅಲಂಕಾರಿಕ ಮೀನು ಸಾಕಾಣಿಕೆ" ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ನವೆಂಬರ್ ೨೧, ೨೦೨೧ರಂದು ಆಯೋಜಿಸಲಾಯಿತು.



## ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ

- ಪಶುಪಾಲನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಪ್ರಾಯೋಜಿತ ಯೋಜನೆಯಡಿಯಲ್ಲಿ 'ಸಮಗ್ರ ಕೃಷಿ ಪದ್ದತಿ ಮತ್ತು ಆದಾಯ ದ್ವಿಗುಣಗೊಳಿಸುವಲ್ಲಿ ಪ್ರಾಣಿ ಸಾಕಣೆ ಪಾತ್ರ' ಎಂಬ ಶೀರ್ಷಿಕೆಯ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ೧ ರಿಂದ ೩ರ ಡಿಸೆಂಬರ್, ೨೦೨೧ರವರೆಗೆ ಹಮ್ಮಿಕೊಳ್ಳಲಾಯಿತು.
- ಭಾರತೀಯ ಕೃಷಿ ಅನುಸಂದಾನ ಪರಿಷತ್, ಕೃಷಿ ವಿಜ್ಞಾನ ಕೇಂದ್ರ (ದಕ್ಷಿಣ ಕನ್ನಡ) ಮಂಗಳೂರು ಹಾಗೂ ತೆಂಗು ಅಭಿವೃದ್ಧಿ ಮಂಡಳಿ (ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ) ಪ್ರಾದೇಶಿಕ ಕಛೇರಿ, ಬೆಂಗಳೂರು ಪ್ರಾಯೋಜಕತ್ವದಲ್ಲಿ ೪೦ ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ತೆಂಗಿನ ಮರದ ಸ್ನೇಹಿತರು – ತೆಂಗಿನಮರ ಹತ್ತುವ ಕುರಿತು ಕೌಶಲ್ಯ ಆಧಾರಿತ ೬ ದಿನಗಳ ೨ ತರಬೇತಿ ಕಾರ್ಯಕ್ರಮಗಳನ್ನು ಡಿಸೆಂಬರ್ ೧೩ ರಿಂದ ೧೮, ೨೦೨೧ರಂದು ಆಯೋಜಿಸಲಾಯಿತು.




- ಭಾ.ಕೃ.ಅ.ಪ– ಕೃಷಿ ವಿಜ್ಞಾನ ಕೇಂದ್ರ (ದಕ್ಷಿಣ ಕನ್ನಡ) ಮಂಗಳೂರಿನಲ್ಲಿ ಕೃಷಿ ಪರಿಕರ ಮಾರಾಟಗಾರರಿಗೆ ಮೋಹಕ ಬಲೆಗಳ ಅಳವಡಿಕೆ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮ ಮತ್ತು ಪ್ರಾತ್ಯಕ್ಷಿಕೆಯನ್ನು ೨೧ರ ನವೆಂಬರ್, ೨೦೨೧ ರಂದು ಆಯೋಜಿಸಲಾಯಿತು.




## ಇತರೆ ಪ್ರಮುಖ ಆಯೋಜಿತ ಕಾರ್ಯಕ್ರಮಗಳು:

### ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ

- ಜಾನುವಾರು ಸಾಕಾಣಿಕಾ ಸಂಕೀರ್ಣದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅನುದಾನದಲ್ಲಿ ನೂತನವಾಗಿ 'ಪಶು ಆಹಾರ ಮತ್ತು ಮೇವಿನ ಅಚ್ಚು (ಬ್ಲಾಕ್) ತಯಾರಿಕಾ ಘಟಕ'ದ ಉದ್ಘಾಟನೆಯನ್ನು ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲದ ಮಾನ ಕುಲಪತಿಗಳಾದ ಪ್ರೊ|| ಹೆಚ್.ಡಿ. ನಾರಾಯಣಸ್ವಾಮಿಯವರು ಜುಲೈ ೧ ೨೦೨೧ ರಂದು ನೆರವೇರಿಸಿದರು.



### ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

- ದಿನಾಂಕ ೨೮.೦೯.೨೦೨೧ ರಂದು ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ "ವಿಶ್ವ ರೇಬೀಸ್ ದಿನ"ವನ್ನು ಆಚರಿಸಲಾಯಿತು.
- ದಿನಾಂಕ ೦೮.೧೦.೨೦೨೧ ರಂದು ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ "ವಿಶ್ವ ಮೊಟ್ಟೆ ದಿನ"ವನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಅಂಗವಾಗಿ ಪಶುವೈದ್ಯಕೀಯ ಮಾಹಾವಿದ್ಯಾಲಯದ ಸಮೀಪವಿರುವ ಚಿಕ್ಕಹೊನ್ನೇನಹಳ್ಳಿ ಮತ್ತು ದಾಸರಕೊಪ್ಪಲು ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಮತ್ತು ರೈತರಿಗೆ ಸುಮಾರು ನಾಲ್ಕು ನೂರಕ್ಕೂ ಹೆಚ್ಚು ಬೇಯಿಸಿದ ಮೊಟ್ಟೆ ವಿತರಿಸಲಾಯಿತು.



- ಭಾರತೀಯ ಹೈನೋದ್ಯಮದ ಪಿತಾಮಹ ಡಾ. ವರ್ಗೀಸ್ ಕುರಿಯನ್‌ರವರ ಜನ್ಮ ಶತಮಾನೋತ್ಸವ ಮತ್ತು ರಾಷ್ಟ್ರೀಯ ಕ್ಷೀರ ದಿನೋತ್ಸವವನ್ನು ದಿನಾಂಕ ೨೯–೧೧–೨೦೨೧ ರಂದು ಪಶುವೈದ್ಯಕೀಯ ಮಹಾವಿದ್ಯಾಲಯ ಹಾಸನದಲ್ಲಿ ಹಮ್ಮಿಕೊಳ್ಳಲಾಗಿತ್ತು.
- ಐ.ಸಿ.ಎ.ಆರ್–ಟಿ.ಎಸ್.ಪಿ ೨೦೨೦–೨೧ ಹಾಸನದ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಸುಸ್ಥಿರ ಆದಾಯಕ್ಕಾಗಿ ನಾಟಿ ಕೋಳಿ ಸಾಕಾಣಿಕೆ ಯೋಜನೆಯಡಿಯಲ್ಲಿ ದಿನಾಂಕ ೧೮.೧೧.೨೦೨೧ ರಂದು ಕುಲಪತಿಗಳಾದ ಪ್ರೊ. ಹೆಚ್.ಡಿ. ನಾರಾಯಣಸ್ವಾಮಿರವರು ಕಲಸದರಹಳ್ಳಿಯ ರೈತ ಮಹಿಳೆಯರಿಗೆ ಒಂದು ದಿನದ ನಾಲ್ಕು ನೂರು ನಾಟಿ ಕೋಳಿಗಳನ್ನು ಪ್ರಾಯೋಗಿಕ ತರಬೇತಿಗಾಗಿ ವಿತರಣೆ ಮಾಡಿದರು.



### ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ

- ಪಶು ಚಿಕಿತ್ಸಾಲಯ, ಲಕ್ಕುಂಡಿ ಇವರ ಸಹಯೋಗದಲ್ಲಿ ಗದಗ ತಾಲೂಕಿನ ದತ್ತು ಗ್ರಾಮ ಸಂಭಾಪುರದ ಎಲ್ಲಾ ಜಾನುವಾರುಗಳಿಗೆ ಸಾಮೂಹಿಕ ಜಂತುಹುಳು ನಿವಾರಣಾ ಕಾರ್ಯಕ್ರಮವನ್ನು ಅಗಸ್ಟ್ ೨೭, ೨೦೨೧ ರಂದು ಕೈಗೊಳ್ಳಲಾಯಿತು.
- ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗನ ಜಾನುವಾರು ಸಾಕಾಣಿಕಾ ಸಂಕೀರ್ಣ ವಿಭಾಗದಲ್ಲಿ ದಿನಾಂಕ ೧೯-೦೯-೨೦೨೧ ರಂದು ೭೫೦ ವೈಟ್ ಲೆಗ್‌ಹಾರ್ನ್ ಮೊಟ್ಟೆ ಕೋಳಿ ಘಟಕವನ್ನು ಪ್ರಾರಂಭಿಸಲಾಯಿತು.

### ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು

- ಮಂಗಳೂರಿನ ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ದಿನಾಂಕ ೨೧-೧೧-೨೦೨೧ ರಂದು ನಡೆದ ವಿಶ್ವ ಮೀನುಗಾರಿಕಾ ದಿನಾಚರಣೆಯ ದಿನದಂದು "ಫಿಶ್ ಗ್ಯಾಲಕ್ಸಿ" ಎಂಬ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು.

### ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು

- ಸ್ವಾತಂತ್ರ್ಯ ಭಾರತದ ಅಮೃತ ಮಹೋತ್ಸವದ ಅಂಗವಾಗಿ ಭಾರತೀಯ ಕೃಷಿ ಅನುಸಂಧಾನ ಪರಿಷತ್- ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ಇವರು ಮೀನಿನ ಮೌಲ್ಯ ವರ್ಧಿತ ಆಹಾರ ಉತ್ಪನ್ನಗಳ ಕುರಿತಾಗಿ ಕೌಶಲ್ಯಾಧಾರಿತ ತರಬೇತಿ, ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ರೈತ ಮಹಿಳೆಯರಿಗಾಗಿ ಪುತ್ತೂರು ತಾಲೂಕಿನ ಬೆಟ್ಟಂಪಾಡಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು. ಶ್ರೀಮತಿ. ಅನಿತಾ, ಪ್ರಗತಿಪರ ಬುಡಕಟ್ಟು ರೈತ ಮಹಿಳೆ ಮೌಲ್ಯವರ್ಧಿತ ಮೀನು ಉತ್ಪನ್ನಗಳ ತಯಾರಿಕೆಯನ್ನು ಪ್ರಾರಂಭಿಸಿದರು. ಸೀಗಡಿ ಚಟ್ನಿ, ಮೀನಿನ ಚಟ್ನಿ, ಉಪ್ಪಿನಕಾಯಿ ಮುಂತಾದ ವಿವಿಧ ಮೌಲ್ಯವರ್ಧಿತ ಮೀನು ಉತ್ಪನ್ನಗಳ ತಯಾರಿಕೆ ಕುರಿತು ಪ್ರಾತ್ಯಕ್ಷಿಕೆ ಏರ್ಪಡಿಸಲಾಗಿದ್ದು, ಈ ಪ್ರದೇಶದ ೩೭ ರೈತರಿಗೆ ಅನುಕೂಲವಾಗಲಿದೆ ಮತ್ತು ವಿವಿಧ ರೈತ ಮಹಿಳೆಯರು ಆದಾಯ ತರುವ ಪ್ರಮಾಣದಲ್ಲಿ ಮೀನು ಮಾರಾಟದ ಮೌಲ್ಯವರ್ಧನೆಯನ್ನು ಕೈಗೊಳ್ಳುತ್ತಿದ್ದಾರೆ.



### ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ನಾಗಮಂಗಲ-ಮಂಡ್ಯ

- ಕುಲಪತಿಗಳಾದ ಪ್ರೊ॥ ಹೆಚ್.ಡಿ. ನಾರಾಯಣಸ್ವಾಮಿ ಅವರು ೨೩.೧೦.೨೦೨೧ ರಂದು ನಾಗಮಂಗಲದ ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರದಲ್ಲಿ (ಎಸ್) ಮೆಗಾ ಶೀಪ್ ಸೀಡ್ ಯೋಜನೆಯಡಿ ಆಯ್ಕೆಯಾದ ಫಲಾನುಭವಿ ರೈತರಿಗೆ ೨೦ ಗಣ್ಯ ಬಂಡೂರು ತಳಿಗಳನ್ನು ವಿತರಿಸಿದರು.
- ವೈಜ್ಞಾನಿಕತೆ ಅಳವಡಿಸಿಕೊಳ್ಳಲು ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರದಲ್ಲಿ (ಕುರಿ) ೦೪.೦೮.೨೦೨೧ ರಂದು ಗೌರವಾನ್ವಿತ ಕುಲಪತಿಗಳಾದ ಪ್ರೊ॥ ಎಚ್.ಡಿ. ನಾರಾಯಣಸ್ವಾಮಿ ಅವರ ಮೂಲಕ ಪರಿಶಿಷ್ಟ ಜಾತಿ ಫಲಾನುಭವಿ ರೈತರಿಗೆ ನೀರಿನ ತೊಟ್ಟಿಗಳು ಮತ್ತು ಮೇವಿನ ತೊಟ್ಟಿಗಳಂತಹ ಅಗತ ಒಳಹರಿವುಗಳನ್ನು ವಿತರಿಸಲಾಯಿತು.



### ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

- ಭಾರತೀಯ ಪಶುವೈದ್ಯಕೀಯ ಔಷಧಶಾಸ್ತ್ರ ಮತ್ತು ವಿಷಶಾಸ್ತ್ರ ಸಂಸ್ಥೆಯ (ಐಎಸ್‌ವಿಪಿಟಿ) ಅಂತರಾಷ್ಟ್ರೀಯ ವೆಬಿನಾರ್ ಮತ್ತು ಸ್ಮಾರಕ ಭಾಷಣಗಳ ಕಾರ್ಯಕ್ರಮದಲ್ಲಿ ಡಾ॥ ರಶ್ಮಿ ರಾಜಶೇಖರಯ್ಯ ರವರಿಗೆ "ಅತ್ಯುತ್ತಮ ಪಿಹೆಚ್.ಡಿ. ಪ್ರಬಂಧ" ಪ್ರಶಸ್ತಿಯನ್ನು ನೀಡಲಾಯಿತು. ಇದನ್ನು ಪಶುವೈದ್ಯಕೀಯ ಔಷಧಶಾಸ್ತ್ರ ಮತ್ತು ವಿಷಶಾಸ್ತ್ರ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ನಾಮಕ್ಕಲ್, ತನುವಾಸ್ ಇವರು ಡಿಸೆಂಬರ್ ೨೧, ರಂದು ಆಯೋಜಿಸಿದ್ದರು.

### ಹೈನುವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು

- ಡಾ. ಹರಿಣಿ ವೇಣುಗೋಪಾಲ್ ಅವರು ೨೧-೨೨ ನವೆಂಬರ್ ೨೦೨೧ ರ ನಡುವೆ ಬೆಂಗಳೂರಿನ ಎನ್.ಎಂ.ಕೆ.ಆರ್.ವಿ.ನಲ್ಲಿ ನಡೆದ ೧೩ ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಕಾಂಗ್ರೆಸ್‌ನಲ್ಲಿ "ಕರ್ಕ್ಯುಮಿನ್- ಡೈರಿ ಉದ್ಯಮಕ್ಕೆ ನೈಸರ್ಗಿಕ ಜೈವಿಕ ಸಕ್ರಿಯ ಘಟಕ" ಗಾಗಿ ಅತ್ಯುತ್ತಮ ಕಾಗದ ಪ್ರಶಸ್ತಿಯನ್ನು ಗೆದ್ದಿದ್ದಾರೆ.

### ಪಶುಆರೋಗ್ಯ ಮತ್ತು ಜೈವಿಕ ಸಂಸ್ಥೆ, ಬೆಂಗಳೂರು

- ಡಾ॥ ಎನ್.ಕೆ. ಧರಣೇಶ ಇವರನ್ನು ಐ.ಎ.ವಿ.ಪಿ. ಸಮಾವೇಶದಲ್ಲಿ "ಚಿಕನ್‌ನಲ್ಲಿ ಸೆಪ್ಟಿಸೆಮಿಯಾದ ಎಟಿಯೋಪಾಥಾಲಜಿ ಮತ್ತು ಚಿಕನ್ ರಕ್ತಹೀನತೆ, ಸಾಂಕ್ರಾಮಿಕ ಬ್ರಾಂಕೈಟಿಸ್ ಮತ್ತು ಸಾಂಕ್ರಾಮಿಕ ಬರ್ಸಲ್ ಕಾಯಿಲೆಯ ವೈರಸ್‌ಗಳೊಂದಿಗೆ ಗಲ್ಲಿಬ್ಯಾಕ್ಟೀರಿಯಮನಾಟಿಸ್‌ನ ಪ್ರಾಯೋಗಿಕ ಕೊಇನ್‌ಫೆಕ್ಷನ್ ಅಧ್ಯಯನಗಳು" ಎಂಬ ಶೀರ್ಷಿಕೆಯ ಪ್ರಬಂಧಕ್ಕೆ 'ಅತ್ಯುತ್ತಮ ಪಿಎಚ್‌ಡಿ ಪ್ರಬಂಧ ಪ್ರಶಸ್ತಿ-೨೦೨೧'ಯನ್ನು ನೀಡಲಾಯಿತು.
- ಡಾ॥ ಎನ್.ಕೆ. ಧರಣೇಶ ಇವರ "ಭಾರತ ದೇಶದ ಕರ್ನಾಟಕದ ದಕ್ಷಿಣ ಜಿಲ್ಲೆಗಳಲ್ಲಿ ಕುರಿ ರೋಗದ ಕ್ಲಿನಿಕೋಪಾಥೋಲಾಜಿಕಲ್ ಮತ್ತು ಆಣ್ವಿಕ ತನಿಖೆ" ಎಂಬ ಶೀರ್ಷಿಕೆಯ ಅತ್ಯುತ್ತಮ ಸಂಶೋಧನಾ ಲೇಖನಕ್ಕಾಗಿ 'ಡಾ॥ ಬಿ.ಎಸ್. ರಾಜ್ಯ ಮೆಮೊರಿಯಲ್' ಪ್ರಶಸ್ತಿಯನ್ನು ನೀಡಲಾಯಿತು.


ಸಂಪಾದಕರು ಮತ್ತು ಪ್ರಕಾಶಕರು :

**ಡಾ. ಎನ್.ಎ. ಪಾಟೀಲ**

ವಿಸ್ತರಣಾ ನಿರ್ದೇಶಕರು<br>
ಕರ್ನಾಟಕ ಪಶವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ<br>
ವಿಜ್ಞಾನಗಳ ವಿಶ್ವವಿದ್ಯಾಲಯ,<br>
ಅಂಚೆ ಸಂ. 06, ನಂದಿನಗರ, ಬೀದರ-585 226<br>
ಕರ್ನಾಟಕ, ಭಾರತ<br>
ದೂ. : 08482-245313; ಮೊಬೈಲ್ : 9448604646


ತೆರೆದ-ಅಂಚೆ

ಮುದ್ರಿತ ವಿಷಯ

ಗೆ,

ವಿತರಣೆವಾಗಿಲ್ಲದಿದ್ದರೆ ದಯವಿಟ್ಟು ಈ ವಿಳಾಸಕ್ಕೆ ಹಿಂದುರುಗಿಸಿ :<br>
**ವಿಸ್ತರಣಾ ನಿರ್ದೇಶಕರು**<br>
**ಕಪಪಮೀವಿವಿ**, ಅಂಚೆ ಸಂ. 6,<br>
ನಂದಿನಗರ, ಬೀದರ-585 226. ಕರ್ನಾಟಕ

